(ಈ ಹಂತದಲ್ಲಿ ಜನತಾ ದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನೆರೆ ಹಾವಳಿ ಸಿಕ್ಕಿದ್ದನ್ನು ನೀವೇ ಒಪ್ಪಿಕೊಂಡಿದ್ದೀರಿ. ೩ ಲಕ್ಷದ ೩೩ ಸಾವಿರ ಎಕರೆ ಹೆಚ್ಚಿಗೆ ನಾಶವಾಗಿದೆ ಎಂದು ಹೇಳುತ್ತೀರಿ. ನೀವು ೫೦೦ ರೂಪಾಯಿ ಕೊಟ್ಟರೂ ಕೂಡ ೧೫ ಕೋಟಿ ರೂಪಾಯಿ ಪರಿಹಾರವನ್ನು ಕೊಡುವುದಕ್ಕೆ ಬೇಕು. ಆದ್ದರಿಂದ ದಯಮಾಡಿ...

Mr.Speaker:- I am calling the Hon'ble Revnue Minister. Kindly answer the next question...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ. ನೀವು ಹೇಳಿದ್ದನ್ನು ನಾವು ಕೇಳಿಕೊಂಡು ಹೋಗುವುದಕ್ಕೆ ಬಂದಿದ್ದೇವೆಯೇ? (ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದವರು ಕರ್ನಾಟಕವನ್ನು ಕಡೆಗಾಣಿಸಿದ್ದಾರೆ, ಮಲತಾಯಿಧೋರಣೆಯನ್ನು ಮಾಡಿದ್ದಾರೆ. ಕೇಂದ್ರ ಸರ್ಕಾರದ ನೀತಿಯ ವಿರುದ್ಧ ನಾವು ಸಭಾತ್ಯಾಗ ಮಾಡುತ್ತಿದ್ದೇವೆ. ಇದರಲ್ಲಿ ಯಾರ ವೈಯಕ್ತಿಕವಾದ ಪ್ರಶ್ನೆ ಇಲ್ಲ. ಏನಿದು ಅನ್ಯಾಯ? ಕೇಂದ್ರ ಸರ್ಕಾರದ ನೀತಿ ಸರಿಯಿಲ್ಲ. ಅನಾಹುತವಾದುದನ್ನು ನೋಡುವುದಕ್ಕೆ ಪ್ರಧಾನ ಮಂತ್ರಿಗಳು ಬರಲಿಲ್ಲ. ಪ್ರಧಾನ ಮಂತ್ರಿಗಳು ಕೇರಳಕ್ಕೆ ಬಂದರು, ಕರ್ನಾಟಕಕ್ಕೆ ಬರಲಿಲ್ಲ. ಕರ್ನಾಟಕವನ್ನು ಕಡೆಗಾಣಿಸಿದ್ದಾರೆ. ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರವನ್ನು ಒಪ್ಪಿಸುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಆದ್ದರಿಂದ ಕೇಂದ್ರದ ನೀತಿಯನ್ನು ನಾವು ವಿರೋಧಿಸುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ನಿಮಗೆ ರೈತರ ಬಗ್ಗೆ ಸ್ವಲ್ಪವೂ ಆಸಕ್ತಿ ಇಲ್ಲ. ನಿಮಗೆ ಮಂತ್ರಿಯಾಗಬೇಕು, ಮುಖ್ಯಮಂತ್ರಿಗಳಾಗಬೇಕು ಎಂದು ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನೀವು ಬಡಿದಾಡಿಕೊಂಡು ಕೈಕಟ್ಟಿಕೊಂಡು ಕುಳಿತಿದ್ದೀರಿ, ರೈತರ ಬಗ್ಗೆ ಒಬ್ಬರೂ ಮಾತನಾಡುವುದಕ್ಕೆ ಸಿದ್ಧವಿಲ್ಲ. ಪರಿಹಾರವನ್ನು ಕೊಡುವುದಕ್ಕೂ ಸಿದ್ಧವಿಲ್ಲ. ನಿಮ್ಮಂಥ ಬೇಜಾವಾದ್ದಾರಿ, ರೈತ ವಿರೋಧಿ ಸರ್ಕಾರ ನೋಡಿ ಅವರೂ ಸಾಯುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಕೇಂದ್ರ ಸರ್ಕಾರದ ಮಲತಾಯಿಧೋರಣೆಗೆ ಧಿಕ್ಕಾರ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮತ್ತು ಮಾನ್ಯ ಕೆ.ಎಸ್. ಈಶ್ವರಪ್ಪನವರು ಸಭಾತ್ಯಾಗವನ್ನು ಮಾಡಿದರು)